

'ಈಗ ನೆನಪು ಮಾಡಿಕೊಂಡರೆ ಯಾಕೆ ಬೆಳೆದು ದೊಡ್ಡವನಾದೆ ಎನಿಸುತ್ತದೆ. ಚಿಕ್ಕವನಾಗಿದ್ದಾಗ ಬೇಗನೇ ಬೆಳೆದು ದೊಡ್ಡವನಾಗಬೇಕೆಂಬ ಆಸೆ ಇತ್ತು. ಬೇಗನೆ ದೊಡ್ಡವಾಗಬೇಕೆಂಬುದು ನನ್ನ ಆಸೆ ಮಾತ್ರವಲ್ಲ; ಎಲ್ಲರ ಆಸೆಯೂ ಆಗಿರುತ್ತದೆ. ದೊಡ್ಡವನಾಗಲು ಬಯಸುವುದು, ಕೊರಗುವುದೇ ಮನುಷ್ಯನ ಸ್ವಭಾವ, ಬದುಕು' ಎಂದು ಇಮೈಯಂ ಒಂದು ಸಂದರ್ಶನದಲ್ಲಿ ಹೇಳಿಕೊಂಡಿದ್ದಾರೆ.

ಅಣ್ಣಾಮಲೈ ಪ್ಲಸ್ ಟೂ ಕಲಿಯುತ್ತಿರುವಾಗ, ಒಮ್ಮೆ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದ ಗಾಯಕರೊಬ್ಬರು ಒಂದು ಕವಿತೆಯೊಂದನ್ನು ಬರೆದುಕೊಡುವಂತೆ ಅವರನ್ನು ಕೇಳಿದರು. ಒಂದು ವಾರದ ನಂತರ ಅಣ್ಣಾಮಲೈ ಅವರು ತಮ್ಮ ಕವಿತೆಯೊಂದಿಗೆ, ಪೆಣ್ಣಾಡಂ ಎಂಬ ಸ್ಥಳದಲ್ಲಿ ನಡೆಯುವ ಕಮ್ಯುನಿಸ್ಟ್ ಪಕ್ಷದ ಸಾರ್ವಜನಿಕ ಸಭೆಗೆ ಹೋದರು. ಆ ಸಭೆಯಲ್ಲಿ ಅವರ ಕವಿತೆಗೆ ಸಮಾಧಾನಕರ ಬಹುಮಾನ ಬಂದು, ಬಹುಮಾನದ ರೂಪದಲ್ಲಿ 'ತಾಯಿ' ಎಂಬ ಪುಸ್ತಕ ದೊರೆಯಿತು. ಅದೇ ಸಮಯದಲ್ಲಿ, ಶಾಲೆಯ ಅಧ್ಯಾಪಕರು 'Animal Farm' ಕಾದಂಬರಿಯ ತಮಿಳು ಆವೃತ್ತಿಯನ್ನು ಕೊಟ್ಟು ಓದಲು ಹಚ್ಚಿದರು. ಅಣ್ಣಾಮಲೈ ಅವರ ಸಾಹಿತ್ಯ ಪಯಣ ಪ್ರಾರಂಭವಾದುದು ಹೀಗೆ.

ಬಲವಂತವಾಗಿ ಹೇರಲಾದ ಪರಿಸ್ಥಿತಿ–ಸಂದರ್ಭಗಳಿಂದ ಸೃಷ್ಟಿಯಾಗುವ ಮನುಷ್ಯರ ಬದುಕನ್ನೂ, ಸಮಾಜವನ್ನೂ ಕುರಿತು ಹಲವು ಚಿಂತನೆಗಳು ಹುಟ್ಟಿಕೊಂಡವು. ಎಲ್ಲ ಮನುಷ್ಯರ ಬದುಕೂ ಒಂದೇ ರೀತಿಯಲ್ಲಿ ಯಾಕಿರುವುದಿಲ್ಲ. ಹೇಗಿರಬೇಕಾದ ಬದುಕು ಹೀಗೇಕೆ ಹಾಳಾಗಿದೆ ಎಂಬ ಚಿಂತನೆಗಳೇ ಇಮೈಯಂ ಅವರ ಸೃಜನಶೀಲ ಬರವಣಿಗೆಗೆ ಪ್ರೇರಣೆಯಾಗಿವೆ.

ಇಮೈಯಂ ಅವರ ಕಾದಂಬರಿಗಳಲ್ಲಿರುವುದು ಒಂದು ಅನುಭವದ ಪೂರ್ಣರೂಪ. ನಿಜವಾದ ಮನುಷ್ಯನ ಸಂಪೂರ್ಣ ಅನುಭವ ಎಂದೇ ಅವರ ಕೃತಿಗಳನ್ನು ಗುರ್ತಿಸಬಹುದು.

ಅವರ ಮೊದಲ ಕಾದಂಬರಿ 'ಕೋವೇರು ಕಳುದೈಗಳ್' (ಹೇಸರಗತ್ತೆಗಳು) 1994ರಲ್ಲಿ ಪ್ರಕಟವಾಯಿತು. ಈ ಕಾದಂಬರಿಯ ಬಗ್ಗೆ ತಮಿಳಿನ ಪ್ರಖ್ಯಾತ ಲೇಖಕರಾದ ಸುಂದರ ರಾಮಸಾಮಿಯವರು, 'ತಮಿಳು ಸಾಹಿತ್ಯದ ಕಳೆದ ನೂರು ವರ್ಷಗಳ ಬೆಳವಣಿಗೆಯಲ್ಲಿ, ಈ ಕಾದಂಬರಿಗೆ